

# ಮೆಹೆಂದಿಯಲ್ಲಿ ಚಿತ್ತಾರ ಮನದಲ್ಲಿ ಸಪ್ತಸ್ವರ!

ಮದುವೆ, ಮುಂಜಿಗಳಂತಹ ಶುಭ ಸಮಾರಂಭ ಇದ್ದಾಗ ಮೆಹೆಂದಿ ಹಾಕಿಕೊಂಡು ಸಂಭ್ರಮಿಸುವುದು ಇದೆ. ಹಬ್ಬದ ಸಂದರ್ಭದಲ್ಲೂ ಈಗೀಗ ಮೆಹೆಂದಿ ಹಚ್ಚಿ ಖುಷಿಪಡುವುದು ಟ್ರೆಂಡ್ ಆಗಿದೆ. ಅಂಗೈಗಳಿಗೆ–ಪಾದಗಳಿಗೆ ಹೂವು, ಎಲೆ, ಬಳ್ಳಿಯಾಕಾರದ ಮೆಹೆಂದಿ ಡಿಸೈನ್‌ಗಳನ್ನು ಹಾಕುವುದು ಮಹಿಳೆಯರಿಗೆ ಇಷ್ಟ.

■ **ಉಮಾ ವೇಣೂರು**

ದೈನಂದಿನ ಏಕತಾನತೆ ಮರೆಸುವುದು ಹಬ್ಬ. ರಂಗೋಲಿ, ತೋರಣ, ಅಡುಗೆ ಹಬ್ಬದ ಸಂಸ್ಕೃತಿ ಆಗಿದೆ. ಹೊಸ ಉಡುಗೆಗಳ ಜೊತೆಗೆ ಕಡುಬಣ್ಣದ ಮೆಹೆಂದಿ ಹಾಕಿಕೊಳ್ಳುವುದು ಕೂಡ ಈಗ ಫ್ಯಾಷನ್‌ನ ಭಾಗವಾಗಿದೆ. ಸಿಂಪಲ್ ಆಗಿದ್ದು ರಾಯಲ್ ಲುಕ್ ನೀಡುವ ಮೆಹೆಂದಿ ವಿನ್ಯಾಸಗಳು ಹಬ್ಬದ ಸಂಭ್ರಮಕ್ಕೆ ಸಾಥಿ ನೀಡುತ್ತವೆ.

ಹೂವಿನಾಕಾರ, ಬಳ್ಳಿಯಾಕಾರ, ಒಡವೆಯ ವಿನ್ಯಾಸದ ಮೆಹೆಂದಿ ಹಬ್ಬದ ಸಂದರ್ಭಕ್ಕಾಗಿಯೇ ಬಳಸಲು ಯೋಗ್ಯವಾಗಿವೆ. ಅಂಗೈ ಹಿಂಭಾಗಕ್ಕೆ ಹೂವಿನಿಂದ ಕೂಡಿದ ಆಲಂಕಾರಿಕ ವಿನ್ಯಾಸದ ರಂಗೋಲಿ ಈಗೀಗ ಟ್ರೆಂಡ್ ಸೃಷ್ಟಿಸಿದೆ.

3ಡಿ ವಿನ್ಯಾಸದ ವಿಶಿಷ್ಟ ಮೆಹೆಂದಿ ಮಣಿಕಟ್ಟಿನ ಮೇಲೆ ಬಳೆಯಂತೆ ಕಾಣಿಸುತ್ತದೆ. ಪುಟ್ಟಪುಟ್ಟ ಕೈಗಳಿಗೆ ಮುದ್ದಾದ ವಿನ್ಯಾಸದ ಮೆಹೆಂದಿ ಹಾಕಿ ಸಂಭ್ರಮಿಸುವುದರಲ್ಲಿ ಪೋರಿಯರಿಗೆ ಖುಷಿಯೋ ಖುಷಿ. ಪೂಜೆಗೆ ರಂಗೋಲಿ ಮಂಡಲ ಹಾಕುವಂತೆ ಕೈಗಳಲ್ಲಿ ಮೆಹೆಂದಿ ವಿನ್ಯಾಸ ಎದ್ದು ಕಾಣುತ್ತದೆ. ಈ ಡಿಸೈನ್ ಮಾಡಲು ಬಹಳ ಸಮಯ ಬೇಕಾಗುವುದರಿಂದ ಹಾಕಲು ತಾಳ್ಮೆಯೂ ಬೇಕು.

